MYSORE LEGISLATIVE ASSEMBLY

THIRTEENTH DAY.

Saturday, 13th July 1957.

The Assembly met in the Assembly Hall, Vidhana Soudha, at Thirty Minutes past Eight of the Clock.

MR. SPEAKER (SRI S. R. KANTHI, B.A., LL.B.) in the Chair.

QUESTIONS AND ANSWERS

Recruitment of Probationers.

Q.—117. Sri N. G. NARASIMHE GOWDA (Sravanabelagola).—

Will the Government be pleased to state :—

(*a*) the date of advertisement pertaining to recruitment of probationers and on whose authority such advertisement was issued last time ;

(*b*) whether they are aware of the fact that on account of delay on their part, applicants have become age-barred by crossing the age-limit prescribed by the Public Service Commission ;

(*c*) (i) the probable date of recruitment of probationers and the number of probationers likely to be recruited ;

(ii) number of hands required to be recruited in respect of each department (Departmentwise information regarding the above to be furnished);

(*d*) the reasons for delaying recruitment of probationers even after the formation of New Mysore State ?

A.—Sri T. MARIAPPA (Minister for Finance) [on behalf of SRI S. NIJALINGAPPA (Chief Minister)].—

(*a*) Advertisements were issued by the Public Service Commission of the Old Mysore State for Probationers in the following departments on the dates mentioned against them :—

(i) Assistant Commissioners Accounts Probationers, Amildars, Assistant Sales Tax Officers, Education Probationers, Assistant Registrars of Co-operative Societies.	27-3-1956
(ii) Electrical Department	8-6-1956
(iii) Department of Industries and Commerce and Department of Printing, Stationery and Publications.	26-6-1956

Advertisements were issued on a requisition for recruitment sent by Government.

(*b*) It is possible that some of the applicants may have exceeded the age-limit prescribed under the relevant recruitment rules consequent on the stoppage of recruitment.

(*c*) (i) and (ii) It is not possible to indicate at present either the numbers to be recruited in the different categories or the probable dates of recruitment.

(*d*) Consequent on the formation of the new State, the State was under an obligation to absorb in the first instance the employees allocated to it from all the five integrating areas. The cadre strengths in the several departments also require review. Rules regarding method of recruitment for the new State are being formulated. It is only after the vacancy position is determined and the rules for recruitment are settled that recruitment can be made.

ಶ್ರೀ ಎನ್. ಜಿ. ನರಸಿಂಹೇಗೌಡ.—ಈ ಪ್ರೊಬೇಷನರರನ್ನು ಕೆಲಸಕ್ಕೆ ತೆಗೆದುಕೊಳ್ಳುವದನ್ನು ಯಾವಾಗ ನಿಲ್ಲಿಸಬೇಕೆಂದು ನಿರ್ಧರಿಸಲಾಯಿತು ?

ಶ್ರೀ ಟಿ. ಮರಿಯಪ್ಪ.—ಹೊಸರಾಜ್ಯ ನಿರ್ಮಾಣದ ಪೂರ್ವದಲ್ಲಿ ತೆಗೆದುಕೊಳ್ಳಬೇಕೆಂದು ಇತ್ತು. ಹೊಸ ರಾಜ್ಯ ನಿರ್ಮಾಣದ ನಂತರ ನಿಲ್ಲಿಸಲಾಯಿತು.

ಶ್ರೀ ಎನ್. ಜಿ. ನರಸಿಂಹೇಗೌಡ.—ಅಸಿಸ್ಟೆಂಟ್ ಕಮೀಷನರುಗಳನ್ನು ತೆಗೆದುಕೊಳ್ಳುವ ಮುಂಚೆ ಈ ಆರ್ಡರ್ ಆಯಿತೋ ಅಥವಾ ಆಮೇಲೆ ಮಾಡಲಾಯಿತೋ ?

ಶ್ರೀ ಟಿ. ಮರಿಯಪ್ಪ.—ತೆಗೆದುಕೊಳ್ಳುವದಕ್ಕೆ ಮುಂಚೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಅವರನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ನಿಲ್ಲಿಸಲಾಯಿತೆಂದು ಹೇಳಿದರೆ ಈ ಆರ್ಡರ್ ಆದಮೇಲೆ ಅಸಿಸ್ಟೆಂಟ್ ಇಂಜಿನಿಯರುಗಳನ್ನು ನಿಯಮಿಸಿರುವುದು ಸರಕಾರದವರ ಗಮನದಲ್ಲಿ ಇದೆಯೇ ?

ಶ್ರೀ ಟಿ. ಮರಿಯಪ್ಪ.—ಇದೆ.

ಶ್ರೀ ಎಚ್. ಜಿ. ನರಸಿಂಹೇಗೌಡ.—ಪ್ರೊಬೇಷನರುಗಳ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣವು ಏನು ?

ಶ್ರೀ ಟಿ. ಮರಿಯಪ್ಪ.—ಹೊಸ ರಾಜ್ಯದ ನಿರ್ಮಾಣದ ದೆಸೆಯಿಂದ ಪ್ರಥಮತಃ ವಿಲೀನವಾದ ಎಲ್ಲ ಐದು ಪ್ರದೇಶಗಳಿಂದಲೂ ಇಲ್ಲಿಗೆ ಹಂಚಿಕೊಡಲ್ಪಟ್ಟ ನೌಕರರನ್ನು ಮೊದಲು ಸೇರಿಸಿಕೊಳ್ಳಬೇಕಾಯಿತು.

ಶ್ರೀ ಎನ್. ಜಿ. ನರಸಿಂಹೇಗೌಡ.—ಪ್ರೊಬೇಷನರುಗಳನ್ನು ಕೆಲಸಕ್ಕೆ ಸೇರಿಸಿಕೊಳ್ಳುವ ವಿಚಾರದಲ್ಲಿ ವಯಸ್ಸಿನ ಪರಿಮಿತಿಯನ್ನು ಗೊತ್ತುಪಡಿಸಿರುವುದರಿಂದ ಅವರನ್ನು ತೆಗೆದುಕೊಳ್ಳುವದಕ್ಕೆ ತಡಮಾಡಿದುದರಿಂದ ವಯಸ್ಸು ಮೀರಿ ಹೋಗುವುದು ಎಂಬುದು ಸರಕಾರದವರ ಗಮನದಲ್ಲಿ ಇದೆಯೇ ?

ಶ್ರೀ ಟಿ. ಮರಿಯಪ್ಪ.—ಕೆಲಸಗಳಿಗೆ ನಿಯಮಿಸುವುದನ್ನು ನಿಲ್ಲಿಸಿದುದರ ಪರಿಣಾಮವಾಗಿ ಸಂಬಂಧಪಟ್ಟ ರಿಕ್ರೂಟ್‌ಮೆಂಟ್ ರೂಲ್ಸಿನ ಮೇರೆಗೆ ವಿಧಾಯಕಮಾಡಲಾದ ವಯಸ್ಸಿನ ಪರಿಮಿತಿಯು ಕೆಲವು ಅರ್ಜಿದಾರರ ಸಂಬಂಧದಲ್ಲಿ ಮೀರಿರುವುದಕ್ಕೂ ಸಾಧ್ಯವಿದೆ.

ಶ್ರೀ ಎನ್. ಜಿ. ನರಸಿಂಹೇಗೌಡ.—ವಯಸ್ಸು ಮೀರಿ ಹೋಗಿದ್ದರೆ ಏನು ಮಾಡಲಾಗುವುದು ?

ಶ್ರೀ ಟಿ. ಮರಿಯಪ್ಪ.—ಏನು ಮಾಡಲಿಕ್ಕೂ ಸಾಧ್ಯವಿಲ್ಲ.

ಶ್ರೀ ಎನ್. ಜಿ. ನರಸಿಂಹೇಗೌಡ.—ಅಂಥವರ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ತಂದಂತೆ ಆಗುವುದಿಲ್ಲವೇ ?

ಶ್ರೀ ಟಿ. ಮರಿಯಪ್ಪ.—ಇದರಲ್ಲಿ ಹಕ್ಕು ಬಾಧ್ಯತೆಯ ಪ್ರಶ್ನೆ ಇಲ್ಲ. ಅಂಥವರನ್ನು ತೆಗೆದುಕೊಳ್ಳದೇ ಹೋದರೆ ಏನು ಮಾಡಲಕ್ಕೂ ಆಗುವುದಿಲ್ಲ.

Sri G. VENKATAI GOWDA.—Does the Government propose to enhance the age-limit of these applicants by about two years ?

Sri T. MARIAPPA.—No. It is not possible.

Sri C. K. RAJAIAH SETTY.—Is it a fact that exemptions in age are given in certain cases ?

Mr. SPEAKER.—It is outside the scope of this question.

Sri A. R. BADRINARAYAN.—What is the policy of the Government in regard to recruitment of probationers, Sir ?

Sri T. MARIAPPA.—The policy is well-known. We want new blood as and when required.

Sri A. R. BADRINARAYAN.—Does it lead to wranglings amongst the regular services ?

Sri T. MARIAPPA.—It is not so at all, Sir.

Sri G. VENKATAI GOWDA.—Are these posts to be filled, Sir ?

Sri T. MARIAPPA.—We are taking an overall picture. States Reorganisation has taken place. The requirements of each Department will certainly be assessed and recruitment made.

ಶ್ರೀ ಎನ್. ಜಿ. ನರಸಿಂಹೇಗೌಡ—ಪುನಃ ಪ್ರೊಬೇಷನರುಗಳನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದಕ್ಕೆ ಯಾವಾಗ ಅರ್ಜಿಗಳನ್ನು ಬರಮಾಡಿಕೊಳ್ಳುತ್ತೀರಿ ?

ಶ್ರೀ ಟಿ. ಮರಿಯಪ್ಪ.—ಈಗಲೇ ಹೇಳುವುದಕ್ಕೆ ಸಾಧ್ಯವಿಲ್ಲ. ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಅಗತ್ಯವಾಗಿದೆ ಎಂಬುದನ್ನು ಮೊದಲು ಅಂದಾಜು ಮಾಡಿಕೊಂಡು ನೋಡಬೇಕಾಗಿದೆ. ಈಗಾಗಲೇ ರಾಜ್ಯ ಪುನರ್ವಿಂಗಡಣೆಯ ಮೂಲಕ ಬಂದಿರತಕ್ಕಂಥ ನೌಕರರನ್ನು ಸೇರಿಸಿಕೊಳ್ಳಬೇಕಾಗಿದೆ. ಸ್ಥಾನಗಳು ಖಾಲಿಯಾಗುವ ಸನ್ನಿವೇಶವನ್ನು ದೃಢಪಡಿಸಿದ ಮೇಲೆ ಮತ್ತು ಕೆಲಸಕ್ಕೆ ನಿಯಮಿಸುವುದಕ್ಕೆ ಸಂಬಂಧಪಟ್ಟ ನಿಯಮಗಳನ್ನು ಇತ್ಯರ್ಥಮಾಡಿದ ಮೇಲೆ ಕೆಲಸಕ್ಕೆ ನಿಯಮಿಸಬೇಕೆಂಬ ಬಗ್ಗೆ ಪರ್ಯಾಲೋಚನೆ ಮಾಡಲಾಗುವುದು.

ಶ್ರೀ ಎನ್. ಜಿ. ನರಸಿಂಹೇಗೌಡ.—ಪುನಃ ಜಾಹಿರಾತು ಕೊಟ್ಟು ಅರ್ಜಿಗಳನ್ನು ತರಿಸುವುದಾದರೆ, ಈ ಮೊದಲೇ ಅರ್ಜಿಗಳನ್ನು ಕಳುಹಿಸಿದವರ ಸಲುವಾಗಿ ಏನಾದರೂ ಅನುಕೂಲವನ್ನು ಒದಗಿಸುತ್ತೀರಾ ?

ಶ್ರೀ ಟಿ. ಮರಿಯಪ್ಪ.—ಇದು ಆಲೋಚನೆ ಮಾಡತಕ್ಕಂಥ ವಿಚಾರ. ಈಗ ಹೊಸ ರಾಜ್ಯವಾಗಿದೆ. ಹೊಸ ಪಬ್ಲಿಕ್ ಸರ್ವಿಸ್ ಕಮಿಷನ್ ಇದೆ. ಹೊಸದಾಗಿಯೇ ಅರ್ಜಿಗಳನ್ನು ತರಿಸಬೇಕಾಗುವುದು.

ಶ್ರೀ ಎಂ. ಲಿಂಗೇಗೌಡ.—ಪ್ರೊಬೇಷನರುಗಳ ಕೆಲಸದ ಸ್ಥಳಗಳಿಗಾಗಿ ಅರ್ಜಿಗಳನ್ನು ಹಾಕಿದಾಗ ಹಣ ಕೊಟ್ಟಿದ್ದಾರೆ. ಅಂಥವರನ್ನು ತೆಗೆದುಕೊಳ್ಳದೇ ಇದ್ದರೆ ಅವರ ಹಣವನ್ನು ವಾಪಸ್ಸು ಕೊಡುತ್ತಾರೇನು?

Sri T. MARIAPPA.—It does not arise from this question.

ಶ್ರೀ ಎಂ. ಲಿಂಗೇಗೌಡ.—ಪ್ರೊಬೇಷನರುಗಳ ಕೆಲಸಕ್ಕೆ ಅರ್ಜಿಗಳನ್ನು ಕಳುಹಿಸಿರತಕ್ಕಂಥವರಿಂದ ಸರಕಾರಕ್ಕೆ ಹಣ ಬಂದಿದೆ. ಅಂಥವರ ಅರ್ಜಿಗಳನ್ನು ವಿಚಾರಣೆಗೆ ತೆಗೆದುಕೊಳ್ಳುವುದಕ್ಕೆ ಒಪ್ಪದೇ ಇದ್ದರೆ, ಅವರು ಅರ್ಜಿಗಳ ಜೊತೆಗೆ ಕೊಟ್ಟಿರುವ ಹಣವನ್ನು ವಾಪಸ್ಸು ಕೊಡದೆ ಇರುವುದಕ್ಕೆ ಕಾರಣವೇನು ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಈಗಾಗಲೇ ಇದಕ್ಕೆ ಉತ್ತರ ಕೊಟ್ಟಿದ್ದಾರೆ. ಹೊಸ ಪ್ರಶ್ನೆ ಏನಾದರೂ ಇದ್ದರೆ ಕೇಳಬಹುದು.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಪ್ರೊಬೇಷನರುಗಳನ್ನು ನೇಮಕ ಮಾಡುವ ಸಂಬಂಧದಲ್ಲಿ ಅರ್ಜಿಗಳ ಜೊತೆಗೆ ಕೊಟ್ಟಿರುವ ಹಣವನ್ನು ಸರಕಾರದವರು ತೆಗೆದುಕೊಂಡಿರುವುದರಿಂದ ಹಣವನ್ನು ವಾಪಸ್ಸು ಕೊಡುವ ಅಂಶವು ಈ ಪ್ರಶ್ನೆಗೆ ಸಂಬಂಧಿಸಿದುದು ಆಗಿದೆ. ಆದಕಾರಣ ಈ ಅಂಶದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರ ಕೊಡುವುದು ಅಗತ್ಯವಾಗಿದೆ.

ಅಧ್ಯಕ್ಷರು.—ತಾವು ಪ್ರಶ್ನೆಯನ್ನು ಕೇಳುತ್ತಿರುವುದಿಲ್ಲ. ವಿವರಣೆ ಮಾತ್ರ ಕೊಡುತ್ತಾ ಇದ್ದೀರಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ—ವಿವರಣೆಯೊಂದಿಗೆ ಇರುವ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳವರು ಅದಕ್ಕೆ ಉತ್ತರ ಕೊಟ್ಟಿದ್ದಾರೆ.

Dr. R. NAGAN GOWDA.—May I know whether the delay from 27th March to 1st November—about 6 to 7 months—was due to large amount of work pending with the Public Service Commission ?

Sri T. MARIAPPA.—Sir, it would be very difficult for me at this stage to answer for all the work done by the previous Government. Still, I have got some information. Practically, this advertisement came on the eve of the reorganisation and the Government of India also advised the State Government not to hustle through this. It is much better that the Hon'ble Member bears this in mind, because he is aware of all this.

Sri G. VENKATAI GOWDA.—Will the Government assure that equal representation would be given to all the integrated areas ?

Mr. SPEAKER.—That is a matter of opinion.

Sri C. K. RAJAIAH SETTY.—The Minister just now said that probationers would be called for as and when vacancies occur. So, these applications were called for ; have they been filled up ?

Sri T. MARIAPPA.—I said, "we will make an estimate of the requirement of each department and as and when we find necessary, we will recruit probationers"—that is how I put it.

I.A.S. and I.P.S. Officers belonging to Scheduled Castes.

Q.—476. Sri C. M. ARUMUGHAM (Kolar Gold Fields).—

Will the Government be pleased to state:—

(*a*) the number of I.A.S. and I.P.S. Officers in the State ;

(*b*) the number of Scheduled Castes persons among them ;

(*c*) whether they intend to recruit qualified Scheduled Castes candidates directly to the posts of Sub-Divisional Officers and Deputy Superintendents of Police ?

A.—Sri T. MARIAPPA (Minister for Finance) [on behalf of Sri S. NIJALINGAPPA (Chief Minister)].—

(*a*) 80 in the I.A.S. and 41 in the I.P.S. cadres.

(*b*) One.

(*c*) Government have already directed in their Order dated 6th April 1955 that 18 per cent of all appointments to be filled up by direct recruitment may be reserved in favour of Scheduled Castes. The cases of Scheduled Castes/Tribes candidates will therefore be duly considered if and when direct recruitment to the cadre of Assistant Commissioners/Deputy Superintendents of Police is contemplated by Government.

Sri C. M. ARUMUGHAM.—In the answer, it is given as 'one' ; does he belong to I A.S. or I.P.S. ?

Sri T. MARIAPPA.—Only one in the I.P S. cadre.

Sri N. RACHIAH.—May I know whether recruitment of I.A.S. and I.P.S. officers amounts to promotion or recruitment ?

Sri T. MARIAPPA.—Perhaps the Hon'ble Member is aware of the rules. Government of India recruit probationers to I.A.S. and I.P.S. cadres.

Sri N. RACHIAH.—While the State Government makes recommendations for these cadres, may I know whether they do it on seniority or merit of the officer concerned ?

Sri T. MARIAPPA.—Sir, in the State there is a list based on both seniority and merit and we make recommendations to Government of India.

Sri N. RACHIAH.—In view of the fact that there is inadequate representation with regard to the Scheduled Castes and Scheduled Tribes, does it not violate the provision of the Constitution ? Will the Government make an attempt to give such representation as is guaranteed to this class of people under the Constitution ?